ಭಾಷೆಯ ಮೇಲಿನ ಹಿಡಿತ, ಆಲೋಚನೆಗೆ ತಕ್ಕ ನುಡಿಗಟ್ಟು, ತಾತ್ವಿಕ ಪರಿಕಲ್ಪನೆಗಳ ಸ್ಪಷ್ಟತೆ, ನೋಟಕ್ರಮಗಳನ್ನು ರೂಪಿಸಿಕೊಳ್ಳುತ್ತಿದ್ದ ಕ್ರಮ, ಜಗತ್ತಿನ ಹಲವು ದಿಕ್ಕಿನ ಸಾಹಿತ್ಯ, ವಿಮರ್ಶೆ, ಸಿದ್ಧಾಂತಗಳನ್ನು ಗ್ರಹಿಸಲು ಇಂಗ್ಲಿಷ್ ಭಾಷೆಯನ್ನು ದಕ್ಷವಾಗಿ ಕಲಿಯಲೆತ್ನಿಸುತ್ತಿದ್ದ ರೀತಿ ಇವೆಲ್ಲವೂ ಅವರು ಅನಂತರದ ವರ್ಷಗಳಲ್ಲಿ ಗಂಭೀರ ಪಿಎಚ್.ಡಿ. ಸಂಶೋಧಕರಾಗಲು ನೆರವಾಗಿವೆ. ಕನ್ನಡ ಕಾವ್ಯದ ಆಳವಾದ ಸಂಶೋಧನೆಯಿಂದ ರೂಪುಗೊಂಡ 'ಶಕ್ತಿ ಶಾರದೆಯ ಮೇಳ'ದಲ್ಲಿ ಹಲವು ಶಿಸ್ತುಗಳು ಸಾಹಿತ್ಯ ವಿಮರ್ಶೆಗೆ ಒದಗಿ ಬಂದಿರುವುದರ ಹಿಂದಣ ಸಿದ್ಧತೆಗಳು ಈ ಟಿಪ್ಪಣಿಗಳಲ್ಲಿವೆ.

ಹೀಗೆ ತಾವು ತೊಡಗಬಯಸಿದ್ದ ವಿಭಿನ್ನ ಕ್ಷೇತ್ರಗಳ ಬಗ್ಗೆ ಸ್ಪಷ್ಟತೆ ಬೆಳೆಸಿಕೊಳ್ಳಲೆತ್ನಿಸುತ್ತಿದ್ದ ವಿದ್ಯಾರ್ಥಿ ಡಿ.ಆರ್. ಮುಂದಿನ ಎರಡು ದಶಕಗಳಲ್ಲಿ ಈ ಎಲ್ಲ ದಿಕ್ಕುಗಳಲ್ಲಿ ಕವಲಾಗಿ ಅಧ್ಯಯನ ಮಾಡಿ, ಅವನ್ನೆಲ್ಲ ಬೆಸೆದು ದೊಡ್ಡ ಚಿಂತಕರಾದರು. ಡಿ.ಆರ್. ಮುಂದೆ ರೂಪಿಸಿಕೊಂಡ ನಿರ್ವಸಾಹತೀಕರಣ ಥಿಯರಿ, ಜಾಗತೀಕರಣ ಕುರಿತ ಚಿಂತನೆಗಳನ್ನು ಬಿಟ್ಟರೆ ಅವರ ಬೌದ್ಧಿಕ ಜೀವನದ ಉಳಿದೆಲ್ಲ ಬಗೆಯ ವಿಮರ್ಶೆ, ವಿಶ್ಲೇಷಣೆಗಳ ಬೇರುಗಳೂ ಅವರ ಆರಂಭಿಕ ಟಿಪ್ಪಣಿಗಳಲ್ಲಿ ಕಾಣುತ್ತವೆ. 'ನಾನೇರುವೆತ್ತರಕೆ ನೀನೂ ಏರು' ಎಂದು ಆಹ್ವಾನಿಸುವಂತಿರುವ ಡಿ.ಆರ್. ತಾರುಣ್ಯಾರಂಭದ ಬೌದ್ಧಿಕ ಪಯಣವನ್ನು ಕಂಡ ಕೆಲವು ಸೂಕ್ಷ್ಮಜೀವಿಗಳಿಗಾದರೂ, ತಾವಿನ್ನೂ 'ಇಂಥ ದೊಡ್ಡ ಪಯಣವನ್ನು ಆರಂಭಿಸಿಯೇ ಇಲ್ಲವಲ್ಲ?' ಎಂಬ ವಿಷಾದ ಮುತ್ತಬಹುದು! ಆದರೆ, ಯಾರು ಯಾವ ಘಟ್ಟದಲ್ಲಾದರೂ ಇಂಥ ಬೌದ್ಧಿಕ ಬದುಕನ್ನು ಆರಂಭಿಸಬಹುದೆಂದು ಈ ಟಿಪ್ಪಣಿಗಳು ನಮ್ಮನ್ನು ಪ್ರೇರೇಪಿಸುತ್ತವೆ.

ಡಿ.ಆರ್. ಈ ಟಿಪ್ಪಣಿಗಳನ್ನು ಬರೆದಿದ್ದು ಇಪ್ಪತ್ತು–ಇಪ್ಪತ್ತೊಂದರ ಹರೆಯದ ನಡುವೆ. ಅವರು ತೀರಿಕೊಂಡಿದ್ದು 44ನೆಯ ವಯಸ್ಸಿನಲ್ಲಿ. ಈ ನಡುವಣ ಇಪ್ಪತ್ತಮೂರು ವರ್ಷಗಳಲ್ಲಿ ಕನ್ನಡದ ಶ್ರೇಷ್ಠ ಸಾಹಿತ್ಯ ವಿಮರ್ಶಕ–ಸಂಸ್ಕೃತಿ ಚಿಂತಕರಾಗಿ, ಅಂತರರಾಷ್ಟ್ರೀಯ ವಿದ್ವಾಂಸರಾಗಿ, ಥಿಯರಿಸ್ಟ್ ಆಗಿ ಬೆಳೆದ ಡಿ.ಆರ್. ಅಷ್ಟು ವೇಗವಾಗಿ ಆ ಎತ್ತರ ತಲುಪಿದ್ದಕ್ಕೆ ಅವರ ಹದಿಹರೆಯ–ತಾರುಣ್ಯಗಳ ತೀವ್ರ ಹುಡುಕಾಟ, ಸೃಜನಶೀಲ ಅತೃಪ್ತಿ ಮತ್ತು ಪರಿಶ್ರಮಗಳೂ ಕಾರಣವಾಗಿದ್ದವು. ಡಿ.ಆರ್. ಈಗ ನಮ್ಮೊಡನಿದ್ದಿದ್ದರೆ 68ರ ಮಾಗಿದ ವಯಸ್ಸಿನಲ್ಲಿರುತ್ತಿದ್ದರು. ಇಪ್ಪತ್ನಾಲ್ಕು ವರ್ಷಗಳ ಕೆಳಗೆ ನಮ್ಮನ್ನಗಲಿದ ಅವರ ಸಿದ್ಧತೆ, ಏಕಾಗ್ರತೆ, ಮಹತ್ವಾಕಾಂಕ್ಷೆಗಳು ನಮ್ಮ ಕಾಲದ ಹೊಸ ಹೊಸ ತಲೆಮಾರುಗಳಲ್ಲಿ ಜೀವಂತ ಬೌದ್ಧಿಕ ಪ್ರೇರಣೆಗಳಿಗೆ ಸ್ಫೂರ್ತಿಯಾಗಲಿ!



## ನಟರಾಜ್ ಹುಳಿಯಾರ್

ಕವಿ, ಕತೆಗಾರ, ಕಾದಂಬರಿಕಾರ, ವಿಮರ್ಶಕ, ಅಂಕಣಕಾರ, ನಾಟಕಕಾರ. 'ಮತ್ತೊಬ್ಬ ಸರ್ವಾಧಿಕಾರಿ', 'ಮಾಯಾ ಕಿನ್ನರಿ', 'ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು' (ಕಥಾಸಂಗ್ರಹಗಳು), 'ಗಾಳಿ ಬೆಳಕು' (ಅಂಕಣ), 'ಶೇಕ್‌ಸ್ಪಿಯರ್ ಮನೆಗೆ ಬಂದ', 'ಮುಂದಣ ಕಥನ' (ನಾಟಕಗಳು), 'ರೂಪಕಗಳ ಸಾವು' (ಕವಿತೆ), 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' (ಸಂಶೋಧನೆ), 'ಇಂತಿ ನಮಸ್ಕಾರಗಳು' (ಸಾಂಸ್ಕೃತಿಕ ಕಥಾನಕ), 'ಕಾಮನ ಹುಣ್ಣಿಮೆ' (ಕಾದಂಬರಿ), 'ಪ್ರಜಾವಾಣಿ' ಅಂಕಣ ಬರಹಗಳ ಪುಸ್ತಕ 'ಕನ್ನಡಿ', 'ಶಾಂತವೇರಿ ಗೋಪಾಲಗೌಡ' (ಜೀವನ ಚರಿತ್ರೆ), 'ಕವಿಜೋಡಿಯ ಆತ್ಮಗೀತ' (ಕಥಾಕಾವ್ಯ) ಅವರ ಕೆಲವು ಪುಸ್ತಕಗಳು. ಪಿ. ಲಂಕೇಶ್ ಅವರ ಆಯ್ದ ಬರಹಗಳ ಇಂಗ್ಲಿಷ್ ವಾಚಿಕೆ 'ಡಾರ್ಕ್ ಅರ್ತ್' ಇತ್ತೀಚೆಗೆ ಪ್ರಕಟವಾಗಿದೆ. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಗಾಂಧೀ ಅಧ್ಯಯನ ಕೇಂದ್ರದ ನಿರ್ದೇಶಕರು.